397 (1017) ಶ್ರೀ ನಾಡಗೌಡ ವೆಂಕಟರಾವ್ ಸಿಂಧನೂರು : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರಿನಿಂದ ಮಸ್ಕಿ ಹಾಗೂ ಸಿಂಧನೂರಿನಿಂದ ತಿರುವಿಹಾಳ್ ರಸ್ತೆ ಸಂಪೂರ್ಣ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಮೇಲ್ಕಂಡ ರಸ್ತೆಗಳನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹಾಗಿದ್ದಲ್ಲಿ ಮೇಲ್ಕಂಡ ರಸ್ತೆಗಳ ದುರಸ್ತಿಗಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು; ರಸ್ತೆವಾರು ವಿವರ ನೀಡುವುದು;

ಈ) ಮೇಲ್ಕಂಡ ರಸ್ತೆಗಳ ದುರಸ್ತಿಗಾಗಿ ಸರ್ಕಾರ ಈವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು; ರಸ್ತೆವಾರು ವಿವರ ನೀಡುವುದು;

ಉ) ಮೇಲ್ಕಂಡ ರಸ್ತೆಗಳ ದುರಸ್ತಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ಗೊತ್ತು ಪಡಿಸಿರುವುದೇ;

ಊ) ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು; ವಿವರ ನೀಡುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸಿಂಧನೂರು–ಮಸ್ಕಿ ರಸ್ತೆ ಹಾಗೂ ಸಿಂಧನೂರು ತಿರುವಿಹಾಳ್ ರಸ್ತೆಗಳ ಸುಧಾರಣೆ ಮತ್ತು ಗುಂಡಿ ಮುಚ್ಚುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳ ಲಾಗಿದ್ದು, ಕೆಲಸವು ಪ್ರಗತಿಯಲ್ಲಿದೆ.

ಇ) ಜಿಲ್ಲಾಧಿಕಾರಿಗಳ ಅನುದಾನದಲ್ಲಿ ಸಿಂಧನೂರು–ಮಸ್ಕಿ ರಸ್ತೆಗೆ ರೂ. 56.00 ಲಕ್ಷಗಳು ಹಾಗೂ ಸಿಂಧನೂರು–ತಿರುವಿಹಾಳ್ ರಸ್ತೆಗೆ ಲೆಕ್ಕ ಶೀರ್ಷಿಕೆ 5054 ಅಡಿಯಲ್ಲಿ ರೂ. 155.00 ಲಕ್ಷಗಳು.

ಈ) ಸಿಂಧನೂರು –ಮಸ್ಕಿ ರಸ್ತೆಗೆ ರೂ. 56.00 ಲಕ್ಷಗಳು ಹಾಗೂ ಸಿಂಧನೂರು – ತಿರುವಿಹಾಳ್ ರಸ್ತೆಗೆ ರೂ. 130.48 ಲಕ್ಷಗಳು.

ಉ) ದಿನಾಂಕ: 31.3.2010 ರೊಳಗಾಗಿ ಪೂರ್ಣಗೊಳಿಸ ಲಾಗುವುದು.

ಊ) ದಿನಾಂಕ: 31.3.2010 ರೊಳಗಾಗಿ ಪೂರ್ಣಗೊಳಿಸ ಲಾಗುವುದು.

ಸಹಾಯ ಧನ ವಿತರಣೆ

1019 (793) ಶ್ರೀ ನರಸಿಂಹ ಸ್ವಾಮಿ ಜಿ. (ದೊಡ್ಡಬಳ್ಳಾಪುರ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಹನಿ ನೀರಾವರಿ ಅಳವಡಿಸಲು ರೈತರಿಂದ ಬಂದಿರುವ ಸಹಾಯಧನದ ಅರ್ಜಿಗಳು ಎಷ್ಟು? ಈವರೆಗೆ ಬಿಡುಗಡೆಯಾಗಿರುವ ಸಹಾಯಧನದ ಮೊತ್ತ ಎಷ್ಟು? ಬಾಕಿ ಉಳಿದಿರುವ ರೈತರ ಸಹಾಯಧನದ ಅರ್ಜಿಗಳಿಗೆ ಸರ್ಕಾರ ಕೈಗೊಂಡಿರುವ ಕ್ರಮ ಏನು?

ಆ) ಬೆಂಗಳೂರು ಗ್ರಾಮಾಂತರ ಜಿಲ್ಲಾ ರೈತರಿಗೂ ಸಹ ಶೇ.100 ರಷ್ಟು ಸಹಾಯಧನ ನೀಡಲು ಸರ್ಕಾರಕ್ಕೆ ಇರುವ ತೊಡಕೇನು?

ಇ) ರೈತರಿಗೆ ಪೂರೈಸುವ ಸಹಾಯಧನದಲ್ಲಿ ಕೀಟನಾಷಕ, ಕ್ರಿಮಿನಾಷಕ ಹಾಗೂ ಆಧುನಿಕ ಕೃಷಿ ಉಪಕರಣಗಳಿಗಾಗಿ ರೈತರ ಬೇಡಿಕೆಗೆ ಸರ್ಕಾರ 2009–10ನೇ ಸಾಲಿಗೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಬಿಡುಗಡೆ ಮಾಡಿರುವ ಹಣ ಎಷ್ಟು ಹಾಗೂ ಬೇಡಿಕೆ ಎಷ್ಟು?

ಈ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಯಡಿಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ಎಷ್ಟು ರೈತರು ಅರ್ಜಿ ಸಲ್ಲಿಸಿರುತ್ತಾರೆ. ಈವರೆವಿಗೂ ಈ ಯೋಜನೆಯಡಿಯಲ್ಲಿ ಅನುಷ್ಠಾನ ಗೊಳಿಸಲು ಎಷ್ಟು ರೈತರನ್ನು ಆಯ್ಕೆ ಮಾಡಲಾಗಿದೆ. ಉಳಿದ ರೈತರನ್ನು ಈ ಯೋಜನೆಗೆ ಒಳಪಡಿಸಲು ಬೇಕಾದ ಹಣ ಪೂರೈಕೆ ಇದೆಯೇ?